**ಕರ್ನಾಟಕ ಸರ್ಕಾರ**

**1ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ, ತರೀಕೆರೆ.**

**ಸಿ.ಸಿ.ನಂ.351/2018**

ಪಿ.ಡಬ್ಲ್ಯೂ: 9

ಸಿ.ಡಬ್ಲ್ಯೂ: 16

ಸಾಕ್ಷಿದಾರರ ಹೆಸರು : ರವಿ

ತಂದೆಯ ಹೆಸರು: :ಸುರೇಶ

ವಯಸ್ಸು : **36 ವರ್ಷ**

ಉದ್ಯೋಗ : ಕೂಲಿ ಕೆಲಸ

ವಾಸಸ್ಥಳ : ಬಾವಿಕೆರೆ

**ದಿನಾಂಕ: 23-03-2026 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು**

**ಮುಖ್ಯ ವಿಚಾರಣೆ :** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ಆರೋಪಿಯು ಈ ದಿನ ನ್ಯಾಯಾಲಯದಲ್ಲಿ ಗೈರು ಹಾಜರಾಗಿದ್ದು, ಆರೋಪಿ ಪರ ವಕೀಲರು ಆರೋಪಿಯ ಗುರುತಿಸುವಿಕೆ ಬಗ್ಗೆ ತಕರಾರು ಇಲ್ಲ ಎಂದು ತಿಳಿಸಿರುತ್ತಾರೆ.

ಈಗ್ಗೆ ಸುಮಾರು ವರ್ಷಗಳ ಹಿಂದೆ ಬಾವಿಕೆರೆಯ ಜಂಬದಹಳ್ಳ ದೇವಸ್ಥಾನದ ಹತ್ತಿರ ಅಪಘಾತದ ವಿಚಾರವಾಗಿ ಪೊಲೀಸರು ಸ್ಥಳ ಮಹಜರ್ ಮಾಡಿದ್ದು, ಸದರಿ ಮಹಜರ್ ಗೆ ನಾನು ಸಹಿ ಮಾಡಿರುತ್ತೇನೆ. ನನ್ನ ಸಮಕ್ಷಮದಲ್ಲಿ ಪೊಲೀಸರು ಯಾವುದೇ ವಸ್ತುಗಳನ್ನು ಅಮಾನತ್ತುಪಡಿಸಿಕೊಂಡಿರುವುದಿಲ್ಲ.

ಸಾಕ್ಷಿಗೆ ಒಂದು ದಾಖಲಾತಿಯನ್ನು ತೋರಿಸಲಾಗಿದ್ದು, ಅದು ಸ್ಥಳ ಮಹಜರ್ ಆಗಿದ್ದು, ಸದರಿ ದಾಖಲೆಯನ್ನು ಈಗಾಗಲೇ ನಿಪಿ-3 ಎಂದು ಗುರುತಿಸಲಾಗಿದ್ದು, ಸಾಕ್ಷಿಯ ಸಹಿಯನ್ನು ನಿಪಿ-3(ಬಿ) ಎಂದು ಗುರುತಿಸಲಾಯಿತು.

ಸಾಕ್ಷಿಯು ನಿಪಿ-4 ರಲ್ಲಿ ತಮ್ಮ ಇರುವಿಕೆಯನ್ನು ನೋಡಿ ಗುರುತಿಸಿರುತ್ತಾರೆ.

**(ಈ ಹಂತದಲ್ಲಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ನೀಡಲಾಯಿತು.)**

**ಪಾಟೀ ಸವಾಲು:** ಸಹಾಯಕ ಸರ್ಕಾರಿ ಅಭಿಯೋಜಕರವರಿಂದ

ದಿನಾಂಕ: **15-07-2017** ರಂದು ಜಂಬದಹಳ್ಳ ಗ್ರಾಮದ ಶ್ರೀಮತಿ ಮಲ್ಲಿಕಮ್ಮನವರ ಮನೆಯ ಮುಂದೆ ಹಾದು ಹೋಗಿರುವ ಟಿ ಎಂ ರಸ್ತೆಯಲ್ಲಿ ಎರಡೂ ಕಾರುಗಳಿಗೆ ಅಪಘಾತವಾದ ವಿಚಾರವಾಗಿ ಪೊಲೀಸರು ಸ್ಥಳ ಮಹಜರ್ ಜರುಗಿಸಿದ್ದು, ಸದರಿ ಮಹಜರ್ ಗೆ ನೀವು ಸಹಿ

ಮಾಡಿರುತ್ತಿರಾ ಎಂದರೆ ಸರಿ. ಮಹಜರ್ ನ್ನು ಪೊಲೀಸರು ಓದಿ ತಿಳಿಸಿರುತ್ತಾರಾ ಎಂದರೆ ಸಾಕ್ಷಿ ಇಲ್ಲ ಎಂದು ನುಡಿದಿರುತ್ತಾರೆ.

**<u>ಪಾಟೀ ಸವಾಲು ಃ ಆರೋಪಿ ಪರ ವಕೀಲರಿಂದ.</u>**

ಅಪಘಾತವಾದ ಎಷ್ಟು ದಿನಗಳ ನಂತರ ಪೊಲೀಸರು ಮಹಜರ್ ಕ್ರಮವನ್ನು ಜರುಗಿಸಿರುತ್ತಾರೆಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ನುಡಿದಿರುತ್ತಾರೆ. ಮಹಜರ್ ನಲ್ಲಿ ಬರೆದಿರುವ ವಿಚಾರ ನನಗೆ ತಿಳಿದಿರುವುದಿಲ್ಲ.

**<u>ಮರುವಿಚಾರಣೆಃ</u>** ಇರುವುದಿಲ್ಲ.

**(ತೆರೆದ ನ್ಯಾಯಾಲಯದಲ್ಲಿ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)**

ಓ. ಕೇ. ಸ. ಇ. ಎ. ಒ.

ಸಹಿ/-

1 ನೇ ಹೆಚ್ಚುವರಿ ಸಿವಿಲ್ ನ್ಯಾಯಾಧೀಶರು ಮತ್ತು

**ಪ್ರ.ದ.ನ್ಯಾ.ದಂ.ರವರು,ತರೀಕೆರೆ.**